# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2019-20 ೮೪೬-೩೧

ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು
ದಿನಾಂಕ: 27 SEP 2019

1. ವ್ಯವಸ್ಥಾಪಕರ ನಿರ್ದೇಶಕರು,
   ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಪಿಸಿಕೆಎಲ್
2. ಎಲ್ಲಾ ಆರ್ಥಿಕ ಸಲಹೆಗಾರರು,
   ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು

ಮಾನ್ಯರೆ,

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕವಿಪ್ರನಿನಿ/ವಿಸಕಂಗಳ ನೌಕರರಿಗೆ ಉದ್ಯೋಗದಾತರ ಪಿಂಚಣಿ ವಂತಿಗೆಯನ್ನು ಶೇ.14ಕ್ಕೆ ಹೆಚ್ಚಿಸಿರುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 37 ಪಿಇಎನ್ 2019 ದಿನಾಂಕ:31.08.2019
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:13.09.2019

*****

ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ, ಸದರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಮಾಸಿಕ ಪಿಂಚಣಿ ವಂತಿಗೆಯಲ್ಲಿ ಉದ್ಯೋಗದಾತರ ವಂತಿಗೆಯನ್ನು ದಿನಾಂಕ:01.04.2019 ರಿಂದ ಜಾರಿಗೆ ಬರುವಂತೆ, ಶೇ. 10 ರಿಂದ ಶೇ.14ಕ್ಕೆ (ಮೂಲ ವೇತನ + ತುಟ್ಟಿ ಭತ್ಯೆ) ಹೆಚ್ಚಿಸಿ ಕರ್ನಾಟಕ ಸರ್ಕಾರವು ದಿನಾಂಕ:31.08.2019ರ ಆದೇಶವನ್ನು ಹೊರಡಿಸಿರುತ್ತದೆ (ಉಲ್ಲೇಖ 1). ಸದರಿ ಆದೇಶವನ್ನು ನಿಗಮವು ದಿನಾಂಕ:13.09.2019ರಲ್ಲಿ ಕವಿಪ್ರನಿನಿ ಹಾಗೂ ಎಲ್ಲಾ ವಿಕಸಂಗಳಲ್ಲಿ ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಅನ್ವಯಿಸುವಂತೆ, ಅಳವಡಿಸಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ವಂತಿಗೆಯನ್ನು ದಾಖಲಿಸಲು ಈ ಕೆಳಗಿನ ಅಂಶಗಳನ್ನು ಅನುಸರಿಸಲು ಕೋರಿದೆ.

1. ನಿಗಮದ ಆದೇಶದನ್ವಯ (ಉಲ್ಲೇಖ 2) ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಸಂಬಂಧಿಸಿದ ಉದ್ಯೋಗದಾತರ ವಂತಿಗೆಯನ್ನು ದಿನಾಂಕ:01.04.2019 ರಿಂದ ಜಾರಿಗೆ ಬರುವಂತೆ, ಶೇ.10 ರಿಂದ ಶೇ.14ಕ್ಕೆ (ಮೂಲ ವೇತನ + ತುಟ್ಟಿ ಭತ್ಯೆ) ಹೆಚ್ಚಿಸಲಾಗಿದೆ.

2. ಜಾಲತಾಣ ಆಧಾರಿತ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಉದ್ಯೋಗದಾತರ ಪಾಲಿನ ವಂತಿಗೆಯನ್ನು ಮಾತ್ರ ದಿನಾಂಕ:13.09.2019ರ ಆದೇಶದನ್ವಯ ದಾಖಲಿಸಲು ಅನುವಾಗುವಂತೆ, ತಂತ್ರಾಂಶವನ್ನು ಶೇ. 14ಕ್ಕೆ ಮಾರ್ಪಡಿಸಲಾಗಿರುತ್ತದೆ.

3. ಕವಿಪ್ರನಿನಿ/ವಿಸಕಂಗಳ ಎಲ್ಲಾ ಲೆಕ್ಕ ಘಟಕಗಳು ಸೆಪ್ಟೆಂಬರ್–2019 ರಿಂದ ಪ್ರಾರಂಭಿಸಿ ಮುಂದಿನ ಅವಧಿಗೆ ಪ್ರತಿ ಮಾಹೆಯ ಅಧಿಕಾರಿ/ನೌಕರವಾರು ಪಿಂಚಣಿ ಕೊಡುಗೆ ವಿವರಗಳನ್ನು ಕಡ್ಡಾಯವಾಗಿ ಆನ್‌ಲೈನ್ ತಂತ್ರಾಂಶದಲ್ಲಿ ದಾಖಲಿಸುವುದು. ಮುಂದುವರೆದು ಕಂಪನಿಯ ನಿಗಮ ಕಚೇರಿಯು ಸದರಿ ದಾಖಲಾತಿ ಬಗ್ಗೆ ಪರಿಶೀಲಿಸಿ, ಅವಶ್ಯವಿದ್ದರೆ ಸರಿಪಡಿಸಲು ಕ್ರಮವಹಿಸಿ, ಕ್ರೋಢೀಕೃತ ಪಿಂಚಣಿ ವಂತಿಗೆ ಮೊತ್ತವನ್ನು ಕೆಇಎನ್‌ಡಿಸಿಪಿಎಸ್ ಘಟಕದ ಖಾತೆಗೆ ವರ್ಗಾವಣೆ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿದೆ.

4. ಸದರಿ ಆದೇಶವು ದಿನಾಂಕ:01.04.2019 ರಿಂದ ಜಾರಿಗೆ ಬಂದಿದ್ದು, ಏಪ್ರಿಲ್–2019ರ ಮಾಹೆಯಿಂದ ಆಗಸ್ಟ್–2019ರ ಮಾಹೆಯವರೆಗಿನ ಬಾಕಿ ವಂತಿಗೆಯನ್ನು ದಾಖಲಿಸುವ ಬಗ್ಗೆ ಪ್ರತ್ಯೇಕವಾಗಿ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

5. ಈ ಯೋಜನೆಯಡಿ ಹಾಲಿ ಜಾರಿಯಲ್ಲಿರುವಂತೆ, ಅಧಿಕಾರಿ/ನೌಕರರ ವೇತನದಿಂದ ಕಡಿತಗೊಳಿಸುವ ಶೇ. 10ರಷ್ಟು (ಮೂಲ ವೇತನ + ತುಟ್ಟಿ ಭತ್ಯೆ) ಮಾಸಿಕ ಪಿಂಚಣಿ ವಂತಿಗೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

6. ತಂತ್ರಾಂಶದಲ್ಲಿ ದಾಖಲಿಸುವ ಪ್ರಕ್ರಿಯೆಯಲ್ಲಿ ಯಾವುದೇ ಸ್ಪಷ್ಟೀಕರಣ ಬೇಕಾದಲ್ಲಿ, ಕೆಇಎನ್‌ಡಿಸಿಪಿಎಸ್ ಘಟಕ, ಕಾವೇರಿ ಭವನವನ್ನು ಸಂಪರ್ಕಿಸಬಹುದು.

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು
ಎನ್‌ಡಿಸಿಪಿಎಸ್

ಪ್ರತಿಗಳು:

1. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಪಿಸಿಕೆಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
3. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ, ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.

4. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ/ಎಸ್ಕಾಂಗಳು
5. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ ಕವಿಪ್ರನಿನಿ/ಎಸ್ಕಾಂಗಳು
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪಲೆಕ್ಕನಿಯಂತ್ರಣಾಧಿಕಾರಿ ಕವಿಪ್ರನಿನಿ/ಎಸ್ಕಾಂಗಳು
7. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ/ಎಸ್ಕಾಂಗಳು
8. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ/ಎಸ್ಕಾಂಗಳು
9. ಕೋಡಿಫಿಕೇಷನ್ ಕೋಶ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು